# ಕರ್ನಾಟಕ ಸರ್ಕಾರ
## (ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ 01 ಇಎಪಿ 2018

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:20/11/2018.

**<u>ಸುತ್ತೋಲೆ</u>**

ವಿಷಯ: ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ನವೆಂಬರ್/ಡಿಸೆಂಬರ್ 2018 ರ ಪರೀಕ್ಷೆಗಳ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿ ಸರ್ಕಾರಕ್ಕೆ ಜಮೆ ಮಾಡಿರುವ ಕುರಿತು ತುರ್ತಾಗಿ ವರದಿ ನೀಡುವ ಬಗ್ಗೆ.

ಉಲ್ಲೇಖ:1) ಸರ್ಕಾರಿ ಆದೇಶ ಸಂ:ಇಡಿ:11:ಟಿಪಿಇ:2007, ದಿ:03/12/2007.
2) ಈ ಕಛೇರಿ ಸುತ್ತೋಲೆ ಸಂ:ಬಿಟಿಇ:01:ಇಎಪಿ:2017 ದಿ:24/11/2017.
3) ಈ ಕಛೇರಿ ಜ್ಞಾಪನ ಸಂ:ಬಿಟಿಇ:03:ಇಸಿಎಸ್(1)/2018, ದಿ:09/11/2018.
4) ಈ ಕಛೇರಿ ಅಧಿಸೂಚನೆ ಸಂ: ಬಿಟಿಇ:01:ಇಎಪಿ:2018 ದಿ:04/07/2018.
5) ಜಂಟಿ ನಿರ್ದೇಶಕರು(ತನಿಖೆ) ಇವರು ದಿನಾಂಕ:17/11/2018 ರಂದು ಸಲ್ಲಿಸಿರುವ ವರದಿ.

*****

ಉಲ್ಲೇಖ(1) ರ ಸರ್ಕಾರಿ ಆದೇಶದಲ್ಲಿ ಅಂಶಿಕ/ಪೂರ್ಣ ಪರೀಕ್ಷೆಯ ಪರೀಕ್ಷಾ ಶುಲ್ಕದ ಮೊತ್ತ ಹಾಗು ಅಂಕಪಟ್ಟಿಯ ಶುಲ್ಕದ ವಿವರಗಳನ್ನು ಹೇಳಲಾಗಿದೆ.

ಉಲ್ಲೇಖ(2) ರ ಈ ಕಛೇರಿ ಸುತ್ತೋಲೆಯಲ್ಲಿ ನವೆಂಬರ್/ಡಿಸೆಂಬರ್ 2017 ರ ಪರೀಕ್ಷಾ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳ ಕೋರ್ಸುವಾರು ವಿವರಗಳನ್ನು ಪರೀಕ್ಷಾ ಶುಲ್ಕ ಪಾವತಿಸಿದ ಜೆರಾಕ್ಸ್ ರಸೀದಿ/ಚಲನ್‌ಗಳೊಂದಿಗೆ ಕಳುಹಿಸಿಕೊಡಲು ಕೋರಲಾಗಿತ್ತು.

ಉಲ್ಲೇಖ(3) ರಂತೆ ನೇಮಕಗೊಂಡಿರುವ ಆಂತರಿಕ ಅಂಕಗಳ ಪರಿವೀಕ್ಷಕರು ದಿನಾಂಕ:08/12/2018 ರಿಂದ 09/12/2018 ರ ಅವಧಿಯಲ್ಲಿ ನವೆಂಬರ್/ಡಿಸೆಂಬರ್ 2018 ರ ಸೆಮಿಸ್ಟರ್ ಪರೀಕ್ಷೆಗಳ ಸಂಬಂಧ ವಿದ್ಯಾರ್ಥಿಗಳಿಂದ ಉಲ್ಲೇಖ(1) & (4) ರ ರೀತ್ಯ ಸಂಗ್ರಹಿಸಲಾಗಿರುವ ಪರೀಕ್ಷಾ ಶುಲ್ಕವನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ಚಲನ್ ಮೂಲಕ ಜಮೆ ಮಾಡಿರುವ ಬಗ್ಗೆ ಸಂಸ್ಥೆಯಲ್ಲಿ ಪ್ರಿನ್ಸಿಪಾಲರೊಂದಿಗೆ ಈ ಕೆಳಗಿನ ಕ್ರಮದಲ್ಲಿ ಪರಿಶೀಲಿಸಲು ಸೂಚಿಸಲಾಗಿದೆ.

1) ಬಿಟಿಇ ಲಿಂಕ್ಸ್ ನಿಂದ ಎಲ್ಲಾ ಕೋರ್ಸುಗಳ ಕ್ಯಾಂಡಿಡೇಟ್ ಲಿಸ್ಟ್ (ಪರೀಕ್ಷಾ ಪೂರ್ವ) All Courses Candidate List (Before Exam) ಎಕ್ಸೆಲ್ ರಿಪೋರ್ಟ್ ಡೌನ್ ಲೋಡ್ ಮಾಡಿ, ಮುದ್ರಿಸಿಕೊಳ್ಳುವುದು.
2) ಅಭ್ಯರ್ಥಿಗಳ ಪ್ರತಿ ರಿಜಿಸ್ಟರ್ ನಂ. ಎದುರು ಉಲ್ಲೇಖ(1) ರಲ್ಲಿ ನಿಗಧಿಪಡಿಸಿದ ದರಗಳಂತೆ ಪರೀಕ್ಷಾ ಶುಲ್ಕ ಪಾವತಿ ಮಾಡಿರುವ (ದಂಡವನ್ನು ಸೇರಿಸಿ) ಮೊತ್ತವನ್ನು ನಮೂದಿಸುವುದು.

3) ಸಂಗ್ರಹಿಸಲಾದ ಪರೀಕ್ಷಾ ಶುಲ್ಕದ ಒಟ್ಟು ಮೊತ್ತ ಮತ್ತು ಕಾಲ ಕಾಲಕ್ಕೆ ಕೆ2 ಮೂಲಕ ಸರ್ಕಾರಕ್ಕೆ ಜಮೆ ಮಾಡಿರುವ ಒಟ್ಟು ಮೊತ್ತಕ್ಕೆ ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸದ ಮೊತ್ತ ಲೆಕ್ಕ ಹಾಕುವುದು ಮತ್ತು ವರದಿಯನ್ನು ಅಂಚೆ ಮೂಲಕ ಕಾರ್ಯದರ್ಶಿಯವರಿಗೆ ಹಾಗು ಪ್ರತಿಯನ್ನು btejdexam@gmail.com ಗೆ ಕಳುಹಿಸುವುದು.

4) ನವೆಂಬರ್/ಡಿಸೆಂಬರ್ 2018 ರ ಥಿಯರಿ ಪರೀಕ್ಷೆಗಳಿಗೆ ನಿಯೋಜಿಸಲ್ಪಟ್ಟಿರುವ ಆಂತರಿಕ ಅಂಕಗಳ ಪರಿವೀಕ್ಷಕರು ಪ್ರಾಂಶುಪಾಲರ ಸಮ್ಮುಖದಲ್ಲಿ ಮೇಲಿನ ಕ್ರಮದಂತೆ ಪರಿಶೀಲಿಸಿ Candidate List ಪ್ರತಿ ಪುಟದಲ್ಲಿ ದೃಢೀಕರಿಸುವುದು.

ನವೆಂಬರ್/ಡಿಸೆಂಬರ್ 2018 ರ ಥಿಯರಿ ಪರೀಕ್ಷೆಗಳಿಗೆ ನಿಯೋಜನೆಗೊಂಡಿರುವ ವಲಯವಾರು ವಿಚಕ್ಷಣಾ ದಳದ ಅಧಿಕಾರಿಗಳು ಈ ಕುರಿತು ವಿಶೇಷ ಗಮನ ಹರಿಸಿ ಪರಿಶೀಲನೆ ಮಾಡುವಂತೆ ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ

ಪ್ರತಿ:

1) ನಿರ್ದೇಶಕರ ಆಪ್ತ ಶಾಖೆ.
2) ಉಪ ನಿರ್ದೇಶಕರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3) ಸಹಾಯಕ ನಿರ್ದೇಶಕರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
4) ಸಿಸ್ಟಂ ಅನಾಲಿಸ್ಟ್, ಗಣಕ ಕೇಂದ್ರ, ಬಿ.ಟಿ.ಇ. ಲಿಂಕ್ಸ್‌ನಲ್ಲಿ ಪ್ರಕಟಿಸಲು.
5) ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು)
6) ಕಾರ್ಯದರ್ಶಿಯವರ ಆಪ್ತ ಶಾಖೆ.
7) ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಅಧೀಕ್ಷಕರು/ಉಪ ಮುಖ್ಯ ಅಧೀಕ್ಷಕರು ಹಾಗು ಪರಿವೀಕ್ಷಕರುಗಳಿಗೆ ಪ್ರಿನ್ಸಿಪಾಲರ ಮುಖಾಂತರ.
8) ಎಲ್ಲಾ ವಲಯಗಳ ವಿಚಕ್ಷಣಾ ದಳದ ಮುಖ್ಯಸ್ಥರುಗಳಿಗೆ
9) ವಿಷಯ ನಿರ್ವಾಹಕರು ಆರ್.ಡಿ.ಎಂ.(08).
10) ಕಛೇರಿ ಕಡತಕ್ಕೆ.

eap sv